

# ನನಗೂ ಸಂಗಾತಿ ಬೇಕು...



‘ಕಚೇರಿಯಿಂದ ಮನೆಗೆ ಬಂದಾಗ, ಒಂದಿಷ್ಟು ಮಾತು. ಪ್ರೀತಿಯ ಅಪ್ಪುಗೆ. ದಿನದ ದಣಿವನ್ನು ಕ್ಷಣದಲ್ಲೇ ನೀವಾಳಿಸಿ ತೆಗೆಯುವ ಪುಟ್ಟ ನಗು. ಹೇಳಿದ್ದನ್ನು ಆಲಿಸಲು ಕಿವಿ, ಜೊತೆಗೊಂದಿಷ್ಟು ಕಾಳಜಿ. ಇಂಥ ಒಬ್ಬಳು ಸಂಗಾತಿ ಬೇಕು. ಹುಡುಕು. ಆಕೆಯನ್ನು ಮದುವೆಯಾಗಿ, ಚೆಂದ ನೋಡಿಕೊಳ್ಳುವೆ. ಆಕೆಯ ಜಾತಿ, ಧರ್ಮ ನೋಡಲ್ಲ. ಅದರ ಸಹವಾಸವೂ ಬೇಡ’ ಎಂದು ಅಭಿಷೇಕ್ ಎದುರಿನಲ್ಲಿ ಕೂತಿದ್ದ ಸಂಜಯ್‌ಗೆ ಹೇಳುತ್ತಿದ್ದ.

ಹುಬ್ಬಳ್ಳಿಯ ಕಾಮತ್ ಹೋಟೆಲ್‌ನಲ್ಲಿ ಕೂತಿದ್ದ ಈ ಇಬ್ಬರೂ ಸ್ನೇಹಿತರು ಬಹುದಿನಗಳ ಬಳಿಕ ಭೇಟಿಯಾಗಿದ್ದರು. ಉದ್ಯೋಗ ಗಳಿಸಿ ಒಂದೆರಡು ವರ್ಷಗಳಷ್ಟೇ ಕಳೆದಿದ್ದವು. ಕೈತುಂಬಾ ಸಂಬಳ. ಅಭಿಷೇಕ್ ಹುಬ್ಬಳ್ಳಿಯಲ್ಲಿ ಬ್ಯಾಂಕ್ ಮ್ಯಾನೇಜರ್, ಸಂಜಯ್ ಬೆಂಗಳೂರಿನಲ್ಲಿ ಐಟಿ ಕಂಪನಿಯೊಂದರಲ್ಲಿ ಟೆಕ್ಕಿ. ಅಸಲಿಗೆ ಇಬ್ಬರೂ ಒಂದೇ ದೋಣಿಯ ಪಯಣಿಗರು. ಆತನಿಗೆ ಹುಡುಗಿ ಸಿಗುತ್ತಿಲ್ಲ, ಈತನಿಗೆ ಹುಡುಗಿಯಿದ್ದರೂ ಮದುವೆಗೆ ಆಕೆಯ ಮನೆಯವರು ಒಪ್ಪುತ್ತಿಲ್ಲ.

ಇವರಿಬ್ಬರೂ ಕಲಿತವರು. 26 ವಯಸ್ಸಿನ ಆಸುಪಾಸಿನವರು. ಉನ್ನತ ಹುದ್ದೆಗಳಲ್ಲಿ ಇರುವವರು. ಇವರ ಪಾಡೇ ಹೀಗಿದ್ದರೆ, ಇನ್ನೂ ಗ್ರಾಮೀಣ ಪ್ರದೇಶದಲ್ಲಿ ಕೃಷಿಕರ ಪರಿಸ್ಥಿತಿಯಂತೂ ಇನ್ನೂ ಗಂಭೀರ ಸ್ವರೂಪದ್ದು. ವಯಸ್ಸು 40 ಸಮೀಪಿಸುತ್ತಿದ್ದರೂ ಮದುವೆಗಾಗಿ ಹೆಣ್ಣಿನ ನಿರೀಕ್ಷೆಯಲ್ಲಿ ದಿನಗಳನ್ನು ದೂಡುತ್ತಿದ್ದಾರೆ.

